## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 100/2024

**ಸಾಕ್ಷಿಯನ್ನು ದಿಃ 23.02.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಡಾ.ಟಿ.ಗುರುಮಲ್ಲಪ್ಪ | ಸಿಡಬ್ಲ್ಯೂಃ 8 | ಪಿಡಬ್ಲ್ಯೂಃ 7 |
| ತಂದೆಯ ಹೆಸರು | ವಿ. ತಿಮ್ಮಯ್ಯ | | |
| ವಯಸ್ಸು | 54 ವರ್ಷ | | |
| ಕೆಲಸ | ಸ್ತ್ರೀರೋಗ ತಜ್ಞ, ಸಾರ್ವಜನಿಕ ಆಸ್ಪತ್ರೆ, ಹುಣಸೂರು | | |
| ವಾಸಸ್ಥಳ | ಹುಣಸೂರು | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ನಾನು 2017 ರಿಂದ ಇಲ್ಲಿಯವರೆಗೂ ಹುಣಸೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಸ್ತ್ರೀರೋಗ ತಜ್ಞನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ನಾನು ದಿಃ 12.12.2023 ರಂದು ಬೆಳಿಗ್ಗೆ 10.25 ಕ್ಕೆ ಚಾಸಾ-1 ರವರು ನನ್ನ ಮುಂದೆ ಹಲ್ಲೆಗೆ ಒಳಗಾದ ಹಿನ್ನೆಲೆಯಲ್ಲಿ ಚಿಕಿತ್ಸೆಗೆ ಹಾಜರಾಗಿದ್ದು, ಅವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1. ಕುತ್ತಿಗೆಯ ಬಲಭಾಗದಲಿ ಒಂದು ತರಚಿತ ಗಾಯ ಇತ್ತು.
2. ಬಲಕಿವಿಯಲ್ಲಿ ನೋವಿದೆ ಎಂದು ತಿಳಿಸಿದರು.
3. ಹೊಟ್ಟೆಯಲ್ಲಿ ನನಗೆ ನೋವಿದೆ ಎಂದಜ ತಿಳಿಸಿದ್ದು ಅದನ್ನು ನಾನು ಖಚಿತಪಡಿಸಿಕೊಂಡಿದ್ದೇನೆ.
4. ಎದೆ ನೋವು ಹಾಗೂ ಉಸಿರಾಡಲು ಕಷ್ಟವಾಗುತ್ತದೆ ಎಂದು ತಿಳಿಸಿದರು.

ಸದರಿ ಗಾಯಾಳುವನ್ನು ಒಳರೋಗಿಯಾಗಿ ದಾಖಲಿಸಿಕೊಂಡು ಜನರಲ್ ಸರ್ಜನ್ ಮತ್ತು ಫಿಜಿಷಿಯನ್ ರವರಿಗೆ ರೆಫರ್ ಮಾಡಿರುತ್ತೇನೆ. ಗಾಯಾಳುವಿಗೆ ಹೊಟ್ಟೆನೋವು ಇದ್ದ ಕಾರಣ ಸ್ಕ್ಯಾನಿಂಗ್ ಮಾಡುವಂತೆ ಜನರಲ್ ಸರ್ಜನ್ ರವರು ಸೂಚಿಸಿರುತ್ತಾರೆ. ಆದರೆ ಗಾಯಾಳು ಸ್ಕ್ಯಾನಿಂಗ್ ಮಾಡಿಸಿಕೊಂಡಿಲ್ಲ.

ನನ್ನ ಅಭಿಪ್ರಾಯದಲ್ಲಿ ಮೇಲೆ ಹೇಳಿದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಆ ಬಗ್ಗೆ ನಾನು ಗಾಯದ ಪ್ರಮಾಣ ಪತ್ರ ನೀಡಿದ್ದು, ಅದನ್ನು ಈಗಾಗಲೇ ನಿಪಿ-6 ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್.ಪಿ ವಕೀಲರಿಂದಃ**

ಒಬ್ಬ ವ್ಯಕ್ತಿ ನೆಲದ ಮೇಲೆ ಬಿದ್ದು ಗಟ್ಟಿಯಾದ ವಸ್ತು ಕುತ್ತಿಗೆಯ ಬಲಭಾಗಕ್ಕೆ ಒತ್ತಿದರೆ ನಿಪಿ-6 ರಲ್ಲಿ ಕಾಣಿಸಿದ ಮೊದಲನೇ ಗಾಯ ಆಗುವ ಸಾಧ್ಯತೆ ಇದೆ ಎಂದರೆ ಸರಿ. ಒಬ್ಬ ವ್ಯಕ್ತಿ ನೆಲದ ಮೇಲೆ ಬಿದ್ದಾಗ ಕಿವಿ, ಎದೆ ಮತ್ತು ಹೊಟ್ಟೆಗೆ ನೋವುಂಟಾಗುವ ಸಾಧ್ಯತೆ ಇದೆ ಎಂದರೆ ಸರಿ. ಚಾಸಾ-1 ರವರ ಜೊತೆ ಅವರ ತಾಯಿಯಾದ ಶಿವಮ್ಮ ಬಂದಿದ್ದರು. ನಿಪಿ-6 ರಲ್ಲಿ ಯಾರಿಂದಾಗಿ ಚಾಸಾ-1 ರವರಿಗೆ ಗಾಯಗಳಾಗಿವೆ ಎಂದು ನಮೂದಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ನಮ್ಮ ಆಸ್ಪತ್ರೆಯ ದಾಖಲೆಗಳ ಪ್ರಕಾರ ಆ ಬಗ್ಗೆ ನಮೂದು ಇದೆ ಎಂದು ನುಡಿಯುತ್ತಾರೆ. ಯಾರಿಂದ ತನಗೆ ಗಾಯಗಳಾಗಿವೆ ಎಂದು ಚಾಸಾ-1 ರವರು ನನ್ನ ಮುಂದೆ ಹೇಳದೇ ಇರುವ ಕಾರಣವೇ ನಾನು ಆ ಬಗ್ಗೆ ನಿಪಿ-6 ರಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಯಾವುದೇ ಒಂದು MLC ಪ್ರಕರಣ ದಾಖಲಾದಲ್ಲಿ ಸಂಬಂಧಪಟ್ಟ ಪೋಲೀಸ್ ಠಾಣೆಗೆ ಮಾಹಿತಿ ನೀಡಲಾಗುತ್ತದೆ ಎಂದರೆ ಸರಿ. ಚಾಸಾ-1 ರವರು ಎಷ್ಟು ದಿನ ಒಳರೋಗಿಯಾದ್ದರು ಎಂದರೆ ದಾಖಲೆಗಳನ್ನು ನೋಡಿ ಹೇಳಬೇಕಾಗುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೋಲೀಸ್ ಠಾಣೆಗೆ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ಮಾಹಿತಿಯನ್ನು ನೀಡಿದ್ದೇವೆ. ನಾವು ಆಸ್ಪತ್ರೆಯಿಂದ ಪೋಲಿಸರಿಗೆ ಮಾಹಿತಿ ನೀಡಿಲ್ಲ ಮತ್ತು ಆ ಕಾರಣದಿಂದ ಪೋಲಿಸರು ಆಸ್ಪತ್ರೆಗೆ ಬಂದಿಲ್ಲ ಮತ್ತು ಚಾಸಾ-1ರವರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ತನಿಖಾಧಿಕಾರಿಯ ಕೋರಿಕೆಯ ಮೇರೆಗೆ ನಿಪಿ-6ರ ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.